# ಮುಖ್ಯಮಂತ್ರಿಗಳ ಕಾರ್ಯಕ್ರಮದ ಹಿನ್ನೆಲೆ, ಪೊಲೀಸ್ ಇಲಾಖೆಯ ಮನವಿಯ ಮೇರೆಗೆ ತಯಾರಿ ಕೆಲಸಗಳಿಗೆ ಕೈ ಜೋಡಿಸಿದ ಶೌರ್ಯ ಶ್ರೀ ಧರ್ಮಸ್ಥಳ ತಂಡ.



ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ನಂದಗಡ ರೂರಲ್ ಎಜುಕೇಷನ್ ಸೊಸೈಟಿ ಮೈದಾನದಲ್ಲಿ 19.01.2026 ರಂದು ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಸ್ತು ಸಂಗ್ರಹಾಲಯ (ವೀರಭೂಮಿ) ಲೋಕಾರ್ಪಣೆ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಅನಾವರಣ ಕಾರ್ಯಕ್ರಮದ ಪೂರ್ವ ಸಿದ್ಧತೆಯಲ್ಲಿ ಪೊಲೀಸ್ ಇಲಾಖೆಯ ಮನವಿಯ ಮೇರೆಗೆ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡದ ಸ್ವಯಂಸೇವಕರು ಸಹಕಾರ ನೀಡಿದರು.

ನಂದಗಡ ಪೊಲೀಸ್ ಠಾಣೆಯಿಂದ ಪಿ.ಎಸ್.ಐ ಎಸ್.ಎಸ್. ಬಾದಾಮಿ ಇವರು 'ಶೌರ್ಯ' ತಂಡದ ಸದಸ್ಯರನ್ನು ಪೂರ್ವ ತಯಾರಿ ಕೆಲಸಗಳಿಗಾಗಿ ಕಳುಹಿಸಿ ಕೊಡುವಂತೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಖಾನಾಪುರ ತಾಲ್ಲೂಕಿನ ಯೋಜನಾಧಿಕಾರಿಯವರಿಗೆ ಮನವಿ ಮಾಡಿಕೊಂಡಿದ್ದರು. ಇದಕ್ಕೆ ಸ್ಪಂದಿಸಿದ ಯೋಜನಾಧಿಕಾರಿ ಗಣಪತಿ ನಾಯ್ಕ ಇವರು ಸುಮಾರು 40 ಸ್ವಯಂಸೇವಕರನ್ನು ಸಿದ್ಧತೆಗೆ ನಿಯೋಜಿಸಿದ್ದರು.




ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರಿಗೆ ಅನ್ನಸಂತರ್ಪಣೆ, ಆಹಾರದ ಪೊಟ್ಟಣ ತಯಾರಿ, ಅಡುಗೆ ತಯಾರಿ ಮತ್ತು ಸ್ವಚ್ಛತಾ ಕೆಲಸಗಳಿಗೆ ಶೌರ್ಯ ತಂಡದ ಸ್ವಯಂಸೇವಕರು ಸಹಕಾರ ನೀಡಿದರು.

ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ತಂಡದ ಸೇವೆಯನ್ನು ಎ.ಎಸ್.ಐ ಸುಬ್ರಹ್ಮಣ್ಯ ರವರು ಪ್ರಶಂಸಿಸಿದರು.

ಶೌರ್ಯ